ಅ) ಹುಕ್ಕೇರಿ ತಾಲ್ಲೂಕಿಗೆ ಒಟ್ಟು 10 ಕೆಳಕಂಡ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿದೆ.

1. ಅಮ್ಮಣಗಿ (ಭಾರತ ಸರ್ಕಾರಿ ಮಾದರಿ)
2. ದಡ್ಡಿ (ಭಾರತ ಸರ್ಕಾರಿ ಮಾದರಿ)
3. ಕಣಗಲೆ
4. ಯು.ಖಾನಾಪುರ
5. ಪಾಶ್ಚಾಪುರ
6. ಯಮಧನಮರಡಿ
7. ಇಂಸ್ಲಾಮಪುರ
8. ಉಲ್ಲಪ್ಪಿ
9. ನೇಗಿನಾಳ್
10. ಸಂಕೇಶ್ವರ

ಆ) ಮೇಲ್ಕಂಡ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಇ) ಉದ್ಭವಿಸುವುದಿಲ್ಲ.

ಗೇರು ಅಭಿವೃದ್ಧಿ ನಿಗಮಕ್ಕೆ ಅರಣ್ಯ ಭೂಮಿಯ ಪಂಚಿಕೆ

548 - ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ ಕ್ಷೇತ್ರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರವು ಗೇರು ಅಭಿವೃದ್ಧಿ ನಿಗಮಕ್ಕೆ ಹಳೆಯ ಗೇರು ತೋಪಿರುವ ಭೂಮಿ 20 ಸಾವಿರ ಹೆಕ್ಟೇರು ಪ್ರದೇಶವನ್ನು ವಹಿಸಿಕೊಟ್ಟಿದ್ದು ನಿಜವೇ.

ಆ) ಈ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಸರ್ಕಾರಿ ಆದೇಶವನ್ನು ಉಲ್ಲಂಘಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ.

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ ಎಪೆಜ್‌ಎಫ್‌ಎಫ್ 173 ಎಫ್‌ಪಿಸಿ 91, ದಿನಾಂಕ :05-04-93 ರಲ್ಲಿ 20 ಸಾವಿರ ಹೆಕ್ಟೇರ್ ಗೇರು ನೆಡುತೋಪನ್ನು ಗೇರು ಅಭಿವೃದ್ಧಿ ನಿಗಮಕ್ಕೆ ವಹಿಸಿಕೊಡಲು ಆದೇಶಿಸಲಾಗಿದೆ.

ಆ) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಸರ್ಕಾರದ ಆದೇಶವನ್ನು ಮರುಪರಿಶೀಲಿಸಲು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ನಂತರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ದಿ: 5-4-93ರ ಆದೇಶವನ್ನು ಜಾರಿಗೆ ಬರುವಂತೆ ಕೋರಲಾಗಿದೆ.

ಇ) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಸರ್ಕಾರದ ಆದೇಶವನ್ನು ಕೂಡಲೇ ಜಾರಿಗೆ ತರುವಂತೆ ಆದೇಶಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಆಸ್ಪತ್ರೆಗಳ ಅಭಿವೃದ್ಧಿ

540 - ಶ್ರೀ ಎಂ.ಎಸ್ ಆತ್ಮಾನಂದ (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯಾ ಜಿಲ್ಲಾ ಆಸ್ಪತ್ರೆ ಮಂಡ್ಯದಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು?